12) ಸಾರ್ವಜನಿಕ ಕಟ್ಟಡ ಹಾಗೂ ರಸ್ತೆ ದುರಸ್ತಿ ಬಗ್ಗೆ	-	40.83
ಒಟ್ಟು	447	75.87

ಇ) ರೂ.87.63 ಲಕ್ಷ ಪರಿಹಾರ ನೀಡಲು ಬಾಕಿ ಇದ್ದು, ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಜಯನಗರ ಬಸ್ ನಿಲ್ದಾಣದಲ್ಲಿ ಬಹುಮಹಡಿ ಕಟ್ಟಡ ನಿರ್ಮಾಣ.

2802: (3750)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಯನಗರ ಬಸ್ ನಿಲ್ದಾಣದ ಕಟ್ಟಡ ಹಳೆಯದಾಗಿದ್ದು, ಹೆಚ್ಚಿನ ಸ್ಥಳಾವಕಾಶವಿಲ್ಲದೆ ಇರುವುದರಿಂದ ಇದನ್ನು ಒಡೆದು ಹೊಸದಾಗಿ ಬಹುಮಹಡಿ ಕಟ್ಟಡ ನಿರ್ಮಿಸಲು ಸರ್ಕಾರ ಆಲೋಚಿಸಿದೆಯೇ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಇಲ್ಲಾ

ಗುಳ್ಳೇದ ಗುಡ್ಡ ಕ್ಷೇತ್ರದಲ್ಲಿ ಅತಿವೃಷ್ಟಿಯಿಂದ ಆಗಿರುವ ಬೆಳೆಹಾನಿ

2806: (3754)

ಶ್ರೀ ರಾಜಶೇಖರ ವಿ.ಶೀಲವಂತ (ಗುಳ್ಳೇದಗುಡ್ಡ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳ್ಳೆದ ಗುಡ್ಡ ಮತಕ್ಷೇತ್ರದಲ್ಲಿ ಕಳೆದ ಮೂರು ತಿಂಗಳುಗಳಲ್ಲಿ ಅತಿವೃಷ್ಟಿಯಿಂದ ಆಗಿರುವ ಬೆಳೆ ಹಾನಿ ಎಷ್ಟು?

ಆ) ಬೆಳೆಯನ್ನು ಕಳೆದುಕೊಂಡ ರೈತನ ಕುಟುಂಬಕ್ಕೆ ಪರಿಹಾರ ಧನ ನೀಡುವ ಉದ್ದೇಶ ಸರ್ಕಾರಕ್ಕಿದಯೇ?

ಇ) ಹಾಗಿದ್ದಲ್ಲಿ ಯಾವ ಆಧಾರದ ಮೇಲೆ ಎಷ್ಟು ಹಣ ನೀಡಲಾಗುತ್ತಿದೆ?

ಈ) ಹಾಗಿಲ್ಲದಿದ್ದಲ್ಲಿ ಬೆಳೆಹಾನಿಯಿಂದ ಕಂಗಾಲಾದ ರೈತನ ಕುಟುಂಬವನ್ನು ಸರ್ಕಾರ ಯಾವ ರೀತಿ ಸಂತೈಸುತ್ತದೆ.

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಅತಿವೃಷ್ಟಿಯಿಂದ ಗುಳೇದ ಗುಡ್ಡ ಮತಕ್ಷೇತ್ರದಲ್ಲಿ ರೂ.224.54 ಲಕ್ಷಗಳ ಮೌಲ್ಯದ ಕೃಷಿ ಬೆಳೆ ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ.

ಆ, ಇ ಮತ್ತು ಈ) ನಿಯಮಾವಳಿಗಳ ಪ್ರಕಾರ ರೂ.18,000 ಕ್ಕಿಂತ ವಾರ್ಷಿಕ ವರಮಾನ ಕಡಿಮೆ ಇದ್ದ ರೈತನ ಬೆಳೆ ಹಾನಿಗೆ ಪ್ರತಿ ಹೆಕ್ಟೇರ್‌ಗೆ ರೂ 500-00 ರಂತೆ ಗರಿಷ್ಠ ರೂ 2000 ಗಳ ಪರಿಹಾರ ನೀಡಲು ಅವಕಾಶವಿರುತ್ತದೆ.

ಗುಳ್ಳೇದಗುಡ್ಡ ಬಸ್ ನಿಲ್ದಾಣದ ಡಾಂಬರೀಕರಣ

2807: (3755)

ಶ್ರೀ ರಾಜಶೇಖರ್ ವಿ.ಶೀಲವಂತ (ಗುಳ್ಳೇದಗುಡ್ಡ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ಬಸ್ ನಿಲ್ದಾಣದ ಆವರಣವನ್ನು ಡಾಂಬರೀಕರಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಅದನ್ನು ಯಾವಾಗ ಮಂಜೂರ್ಮಾಡಲಾಗುವುದು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಹೌದು

ಆ) ಡಾಂಬರೀಕರಣ ಕೆಲಸ ನಿರ್ವಹಿಸಲು ರೂ.4,80,000-00ಗಳ ಅಂದಾಜು ಪಟ್ಟಿ ಮಂಜೂರಾತಿಯಾಗಿದ್ದು ಸದರೀ ಕೆಲಸಕ್ಕಾಗಿ ದಿನಾಂಕ: 15-10-1998ರಂದು ಟೆಂಡರ್ ಕರೆಯಲಾಗಿದೆ.

ಗುಳೇದಗುಡ್ಡ ಕ್ಷೇತ್ರದ ದೇವಸ್ಥಾನಗಳಿಗೆ ಅನುದಾನ ಬಿಡುಗಡೆ